143
15/ಎಲ್‌ಇ

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ, ಇವರು ನಿಯಮ-72ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ.**

**ಸೂಚನೆ:-**

ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ವೆಂಕಟಾಲ ಗ್ರಾಮ ಸರ್ವೆ ನಂ. 34/2 ಒಟ್ಟು ವಿಸ್ತೀರ್ಣ 2.26 ರಲ್ಲಿ ರೈತರಿಗೆ ಜನಜಾನುವಾರುಗಳಿಗೆ ಓಡಾಡಲು ರಸ್ತೆ ಸೌಕರ್ಯ ಕಲ್ಪಿಸದಿರುವ ಬಗ್ಗೆ ಮತ್ತು ಬಫರ್ ಮತ್ತು ಬಫರ್ ಜೋನ್ ಏರಿಯಾ ಕುರಿತು ಗುರುತಿಸಿ ಅಲ್ಲಿ ಅಕ್ರಮ ಕಟ್ಟಡಗಳು ನಿಯಮಬಾಹಿರವಾಗಿ ಕಟ್ಟಡ ಕಟ್ಟಿದ್ದು ಅವುಗಳು ತಲೆಎತ್ತದಂತೆ ತಡೆಗಟ್ಟುವ ಬಗ್ಗೆ, ಬಫರ್ ಜೋನ್ ಮಾಹಿತಿ ಸ್ಪಷ್ಟೀಕರಿಸುವ ವಿಚಾರದಲ್ಲಿ ಹಾಗೂ ಸದರಿ ಸರ್ವೆ ನಂ: ಜಾಗವು ಯಾರ ಹೆಸರಿನಲ್ಲಿದೆ ಮತ್ತು ಸದರಿ ಜಾಗವು ಬೇರೆಯವರಿಂದ GPA ನೋಂದಣಿ ಆಗಿರುವ ಬಗ್ಗೆ ಹಾಗೂ ಅವರ ವಿವರಗಳ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಹೇಳಿಕೆ:**

ಯಲಹಂಕ ಹೋಬಳಿ, ವೆಂಕಟಾಲ ಗ್ರಾಮದ ಸ.ನಂ. 34ರಲ್ಲಿ ಒಟ್ಟು ವಿಸ್ತೀರ್ಣ 2-26 ಎಕರೆ/ಗುಂಟೆ ಜಮೀನಿನ ಆಕಾರ್‌ಬಂದ್‌ನಂತೆ 0-02 ಗುಂಟೆ ಖರಾಬು ಜಾತ ಉಳಿಕೆ 2-24 ಎಕರೆ/ಗುಂಟೆ ಇರುತ್ತದೆ. ಈ ಜಮೀನಿನಗೆ ಸಂಬಂಧಿಸಿದಂತೆ ಗ್ರಾಮ ನಕಾಶೆಯಲ್ಲಿ ಯಾವುದೇ ಬಂಡಿದಾರಿ ಇರುವುದಿಲ್ಲ. ಪ್ರಸ್ತಾಪಿತ ಜಮೀನು ಹಾಲಿ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ಯಲಹಂಕ ಕೆರೆಗೆ ಹೊಂದಿಕೊಂಡಿರುವಂತ ಜಮೀನಾಗಿದ್ದು, ಸದರಿ ಜಮೀನಿಗೆ ರಸ್ತೆ / ಬಫರ್ ಕಟ್ಟಡ ನಿರ್ಮಾಣದ ಬಗ್ಗೆ ಸ್ಥಳೀಯ ಪ್ರಾಧಿಕಾರದವರು ಕ್ರಮವಹಿಸಬೇಕಾಗಿರುತ್ತದೆ. ಹಾಲಿ ಸರ್ವೆ ನಂ. 34 ಪೋಡಿಯಾಗಿ ಹೊಸ ಸರ್ವೆ ನಂ. 34/1 ಮತ್ತು 34/2 ಎಂದು ಹಾಗೂ 34/2 ರಿಂದ 34/3 ಎಂದು ಆಗಿದ್ದು, ಸರ್ವೆ ನಂ. 34/2 ರಲ್ಲಿ ಪಹಣಿಯಂತೆ ಒಟ್ಟು ವಿಸ್ತೀರ್ಣ 1-01 ಎಕರೆ/ಗುಂಟೆ ಪೈಕಿ 0-01.08 ಗುಂಟೆ ಖರಾಬು ಜಾತ 00-39.08 ಗುಂಟೆ ಇದ್ದು, ಕಾಲಂ 9ರಲ್ಲಿ ಅನ್ನಯ ಪ್ರಾಪರ್ಟೀಸ್ ಪರವಾಗಿ ವೆಂಕಟೇಶ ಬಿ.ಎಸ್. ಬಿನ್ ವಿ. ಶ್ರೀನಿವಾಸಯ್ಯ ರವರ ಹೆಸರಿನಲ್ಲಿ ಖಾತೆ ನಮೂದಾಗಿರುತ್ತದೆ ಮತ್ತು ಸರ್ವೆ ನಂಬರ್ 34/3 ರಲ್ಲಿ ಒಟ್ಟು 1-06.08 ಎ/ಗುಂಟೆ ವಿಸ್ತೀರ್ಣವಿದ್ದು, ಪಹಣಿ ಕಾಲಂ ನಂ. 9 ರಲ್ಲಿ ಸಿ. ಮುನಿರಾಜು ಬಿನ್ ಚಂಚಲಯ್ಯ, ಬಿ.ವಿ. ಬಸವರಾಜ ನಾಯಕ ಬಿನ್ ವೆಂಕಟರಮಣಪ್ಪ, ರವಿ ಕುಮಾರ್ ಎಸ್.ಎನ್.ಬಿನ್ ನರಸೀಯಪ್ಪ, ಸಿ.ಟಿ. ಕಾವೇರಪ್ಪ ಬಿನ್ ಸಿ.ಸಿ. ತಿಮ್ಮಯ್ಯ ರವರುಗಳ ಹೆಸರಿನಲ್ಲಿ ಜಂಟಿಯಾಗಿ ಖಾತೆ ನಮೂದಾಗಿರುತ್ತದೆ. ವೈ.ಜಿ. ನಿರ್ಮಲ, ವೈ.ಜಿ. ಪುರುಷೋತ್ತಮ್ಮ, ವೈಜಿ. ಯಶೋಧ, ವೈ.ಜಿ ಮುರಳಿ ಪಾಟೀಲ್ ರವರ ಹೆಸರಿನಲ್ಲಿ ಜಂಟಿಯಾಗಿ ಖಾತೆ ದಾಖಲಾಗಿರುತ್ತದೆ.

ಯಲಹಂಕ ಹೋಬಳೀ, ವೆಂಕಟಾಲ ಗ್ರಾಮದ ಸ.ನಂ. 34/2ರ ಮೂಲ ದಾಖಲೆಗಳನ್ವಯ ಸದರಿ ಸರ್ವೆ ನಂಬರಿನಲ್ಲಿ 0-01.08 ಗುಂಟೆ ಕಾಲುವೆ ಬಗ್ಗೆ ಖರಾಬು ದಾಖಲಾಗಿರುವುದು ಕಂಡುಬಂದಿರುತ್ತದೆ ಹಾಗೂ ನಕ್ಷೆಯಲ್ಲಿ ಹಳದಿ ಬಣ್ಣದಿಂದ ಗುರುತಿಸಿರುವಂತೆ ವೆಂಕಟಾಲ ಗ್ರಾಮದ ಕೆರೆ ಸ.ನಂ. 39 ಬಫರ್ ಪ್ರದೇಶವಾಗಿದ್ದು, ಸ.ನಂ. 34/1 ರಲ್ಲಿ 0-02.08 ಗುಂಟೆ ಮತ್ತು ಸರ್ವೆ ನಂ. 34/2 ರಲ್ಲಿ 00-21 ಗುಂಟೆ ವಿಸ್ತೀರ್ಣವು ಬಫರ್ ಪ್ರದೇಶವಾಗಿರುತ್ತದೆ.

ಪ್ರಸ್ತಾಪಿತ ಯಲಹಂಕ ಹೋಬಳಿ ವೆಂಕಟಾಲ ಗ್ರಾಮದ ಸ.ನಂ. 34/2 ರಿಂದ ಹಿಸ್ಸಾ ಪೋಡಿಯಾಗಿ ಸ.ನಂ. 34/3 ಎಂದು ಇಂಡೀಕರಣವಾಗಿದ್ದು, ಈ ಹಿಂದೆ 34/2ರಲ್ಲಿ 00-21 ಗುಂಟೆ ವಿಸ್ತೀರ್ಣವು ಬಫರ್ ಪ್ರದೇಶವಾಗಿದ್ದು ಸ.ನಂ. 34/2 ರಿಂದ 34/3 ಎಂದು ಪೋಡಿಯಾಗಿರುತ್ತದೆ.

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಸಂಖ್ಯೆ: ಆರ್‌ಡಿ 123 ಎಲ್‌ಜಿಕ್ಯೂ 2026